15	ಹಿರೇಕೊರಲಹಳ್ಳಿ ಮರಾಠ ಕ್ಯಾಂಪ್‌ಗೆ ಹೋಗುವ ರಸ್ತೆ	1.00
16	ತಾಳಗುಂದ ಸ್ಮಶಾನ ರಸ್ತೆ	1.00
17	ತಾಳಗುಂದ ಬಿಸಲಿಳ್ಳಿಗೆ ಹೋಗುವ ರಸ್ತೆ	0.30

5263(5944) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಉಪ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸೂರು ಗಡಿ ರಸ್ತೆಯಲ್ಲಿರುವ ತನಿಖಾ ಠಾಣೆಯ ಹತ್ತಿರ ಸಂಚಾರದ ಒತ್ತಡದಿಂದ ಅಪಘಾತಗಳು ಸಂಭವಿಸಿ ಸಾವನ್ನುಂಟು ಮಾಡುವ ಅನೇಕ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಇಂತಹ ಅಪಘಾತಗಳು ಸಂಭವಿಸುವ ಅಂತರವೇನು?

ಇ) ಇಂತಹ ಅಪಘಾತಗಳನ್ನು ಕನಿಷ್ಠ ಮಟ್ಟಕ್ಕೆ ತರಲು ಈಗ ಇರುವ ತನಿಖಾ ಠಾಣೆಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವ ಪ್ರಸ್ತಾವನೆಯು ಇರುತ್ತದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಯವರು) :

ಅ) ದಿನಾಂಕ 9-2-2003 ರಂದು ಒಂದೇ ಒಂದು ಅಪಘಾತ ಸಂಭವಿಸಿದ ಬಗ್ಗೆ ವರದಿಯಾಗಿದ್ದು. ಅಪಘಾತದಲ್ಲಿ ಭದ್ರತಾ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ. ಈ ಘಟನೆಯ ನಂತರ ಸಾವನ್ನುಂಟು ಮಾಡಿರುವ ಅಪಘಾತಗಳು ನಡೆದ ಘಟನೆಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಒಂದೇ ಒಂದು ಘಟನೆಯ ಬಗ್ಗೆ ವರದಿಯಾಗಿರುತ್ತದೆ.

ಇ) ಈಗಿರುವ ತನಿಖಾ ಠಾಣೆಯನ್ನು ಸ್ಥಳಾಂತರ ಮಾಡಿ ವಾಣಿಜ್ಯ, ತೆರಿಗೆ ಸಾರಿಗೆ, ಅಬಕಾರಿ ಮತ್ತು ಅರಣ್ಯ ಇಲಾಖೆಗಳಿಗೆ ಒಂದೇ ಸೂರಿನಡಿಯಲ್ಲಿ ಕಾರ್ಯ ನಿರ್ವಹಿಸುವ ಸಂಯೋಜಿತ ತನಿಖಾ ಠಾಣೆಯನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಇರುತ್ತದೆ. ಇದಕ್ಕಾಗಿ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಮತ್ತು ಗಿಡ್ಡೇನಹಳ್ಳಿ ಗ್ರಾಮಗಳಿಂದ 25 ಎಕರೆ 7 ಗುಂಟೆ ಜಮೀನನ್ನು ವಶ ಪಡಿಸಿಕೊಳ್ಳಲಾಗಿದೆ. ಇದರಲ್ಲಿ ತನಿಖಾ ಠಾಣೆ ನಿರ್ಮಾಣ ಕಾರ್ಯಕ್ಕೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ನಿರ್ಣಯಿಸಿದ ನಂತರ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

5264(4484) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2004-05ನೇ ಹಾಗೂ 2005-06ನೇ ಸಾಲಿನಲ್ಲಿ ನಬಾರ್ಡ್‌ನಿಂದ ಲೋಕೋಪಯೋಗಿ ರಸ್ತೆಗೆ ವಿಧಾನಸಭಾ ಕ್ಷೇತ್ರವಾರು ಬಿಡುಗಡೆ ಮಾಡಿದ ಹಣದ ವಿವರ ನೀಡುವುದು?